ನೀರನ್ನೂ ಸಹ ನಾನು ಬಿಡುಗಡೆ ಮಾಡುವುದಿಲ್ಲ, ನಿಮ್ಮನ್ನು ಈ ವಿಷಯದಲ್ಲಿ ವಿಶ್ವಾಸಕ್ಕೆ ತೆಗೆದುಕೊಳ್ಳುತ್ತೇನೆ. ಎಂಬ ಮಾತನ್ನು ನೀವು ಎಲ್ಲಿ ಹೇಳಿದಿರಿ? ನಿನ್ನೆ ದಿವಸ ನಾವು ಕ್ಲಾರಿಫಿಕೇಶನ್ ಕೇಳುವಂಥ ಸಂದರ್ಭದಲ್ಲೂ ಸಹ ಈ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲಿಲ್ಲ. ಅನಂತರ, 'ಪ್ರಜಾವಾಣಿ' ಮತ್ತು 'ಕನ್ನಡ ಪ್ರಭ' ಪತ್ರಿಕಾಲಯಗಳಿಗೆ ಫೋನ್ ಮಾಡಿ 'ನಾನು ಹೇಳಬೇಕೆಂದಿದ್ದೆ, ಈ ನಿಮಿಷದಿಂದು ಒಂದು ಹನಿ ನೀರನ್ನೂ ಸಹ ಬಿಡುವುದಿಲ್ಲ ಎಂದು ರಾತ್ರಿ ನಾನು ಸಂಬಂಧಿಸಿದ ಅಧಿಕಾರಿಗಳ ಜೊತೆ ಮಾತನಾಡಿದ್ದೇನೆ: ಆದರೆ, ಕೃಷ್ಣರಾಜಸಾಗರದಿಂದ ಈಗಲೂ ನೀರು ಹರಿದುಹೋಗುತ್ತಿದೆಯೆಂದು ಅಲ್ಲಿಂದ ಬಂದ ಜನರು ಹೇಳುತ್ತಿದ್ದಾರೆ. ನಿನ್ನೆ ದಿವಸ ನೀವು ಏನು ಪತ್ರಿಕಾ ಹೇಳಿಕೆ ಕೊಟ್ಟಿದ್ದೀರಿ, ಅದೂ ಸಹ ಸರಿಯಲ್ಲ, ಇವೊತ್ತು ನೀರು ಬಿಡುತ್ತಿದ್ದೀರಿ. 92ರ ನಿಯಮದ ಪ್ರಕಾರ ಟ್ರಿಬ್ಯೂನಲ್ ಮುಂದೆ ನೀವು ಏನು ಒಪ್ಪಿಕೊಂಡಿದ್ದಿರೀ, ಪೂರ್ಣ ನೀರನ್ನು ಅಂದರೆ 57.97 ಟಿಎಂಸಿಯಷ್ಟು ನೀರನ್ನು ಏನು ಬಿಡಬೇಕಾಗಿತ್ತು, ನನ್ನ ಲೆಕ್ಕದ ಪ್ರಕಾರ ಸಂಪೂರ್ಣ ನೀರನ್ನು ಬಿಟ್ಟಿದ್ದೀರಿ. ನಿಮ್ಮ ದಾಖಲೆಯಲ್ಲಿ 56 ಟಿಎಂಸಿ ಎಂದು ಇದ್ದರೂ ಪೂರ್ಣ ನೀರನ್ನು ಬಿಟ್ಟಿರುವುದು ಅಕ್ಷಮ್ಯ ಅಪರಾಧ. ಅದಕ್ಕಾಗಿ ನಾನು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ. ದಯಮಾಡಿ ತಾವು ಜನರ ಮುಂದೆ ಕ್ಷಮಾಪಣೆ ಕೇಳಬೇಕು. ಎರಡನೆಯದು, ನಾಳೆಯಿಂದ ಒಂದು ಹನಿ ನೀರನ್ನೂ ಬಿಡುವುದಿಲ್ಲ ಎನ್ನುವಂಥ ಭರವಸೆಯನ್ನು ಕೊಡಬೇಕು. ಅದಕ್ಕಾಗಿ ನಾವು ಧರಣಿ ಕುಳಿತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ನಾವು ಸಂಪೂರ್ಣವಾಗಿ ನ್ಯಾಯಮಂಡಳಿಯನ್ನು ಬಹಿಷ್ಕರಿಸುತ್ತೇವೆ, ಆ ನ್ಯಾಯಮಂಡಳಿ ನಮಗೆ ಬೇಡ, ಮಧ್ಯಂತರ ತೀರ್ಪು ಸಹ ಬೇಡ. ನೀರು ಬಿಡುವುದು, ನಿಲ್ಲಿಸುವುದು ಬೇಕಾಗಿಲ್ಲ. ಮಧ್ಯಂತರ ತೀರ್ಪನ್ನು ಜಾರಿಗೊಳಿಸಬಾರದು. ನಾವು ನ್ಯಾಯಮಂಡಳಿ ವಿರುದ್ಧ ಕಪ್ಪು ಬಾವುಟ ಪ್ರದರ್ಶಿಸುತ್ತಿದ್ದೇವೆ, ನಮಗೆ ಅದು ಅನ್ಯಾಯ ಮಾಡುತ್ತದೆ, ಆ ನ್ಯಾಯಮಂಡಳಿ ಅಕ್ರಮ. ನ್ಯಾಯಮಂಡಳಿಯಿಂದ ನಮಗೆ ನ್ಯಾಯ ದೊರಕುವುದಿಲ್ಲವೆಂಬುದು ಸ್ಪಷ್ಟವಾದ ಅಭಿಪ್ರಾಯ. ಇದರ ಬಗ್ಗೆ ನಮ್ಮ ನಿಲುವಿನಲ್ಲಿ ಯಾವುದೇ ಬದಲಾವಣೆಯಿಲ್ಲ. ನಾವು ಮತ್ತು ರೈತ ಸಂಘದವರು ಇಡೀ ರಾಜ್ಯಾದ್ಯಂತ ನ್ಯಾಯಮಂಡಳಿಯನ್ನು ಸಂಪೂರ್ಣವಾಗಿ ಬಹಿಷ್ಕರಿಸಿಬೇಕೆನ್ನುವುದೇ ನಾವು ಮೊದಲಿನಿಂದಲೂ ಮಾಡಿಕೊಂಡು ಬರುತ್ತಿರುವ ಒತ್ತಾಯವಾಗಿದೆ. ನ್ಯಾಯಮಂಡಳಿಯ ತೀರ್ಪು ನಮಗೆ ಮರಣ ಶಾಸನವಾಗಿದೆ, ಅದರ ತೀರ್ಪು ಕನ್ನಡಿಗರಿಗೆ ಒಳ್ಳೆಯದಲ್ಲ, ಬರಸಿಡಿಲು, ಕರಾಳ ದಿನ. ಆದುದರಿಂದ, ನಾವು ನ್ಯಾಯಮಂಡಳಿಯನ್ನು ಸಂಪೂರ್ಣವಾಗಿ ವಿರೋಧಿಸಿ ನಾವು ಹಾಗೂ ರೈತ ಸಂಘದವರು ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ 'ವಾಟಾಳ್ ಪಕ್ಷದ' ಶ್ರೀ ವಾಟಾಳ್ ನಾಗರಾಜ್‌ರವರು ಮತ್ತು ರೈತ ಸಂಘದ ಶ್ರೀ ಕೆ.ಎಸ್.ಪುಟ್ಟಣ್ಣಯ್ಯನವರು ಕಪ್ಪು ಭಾವುಟ ಪ್ರದರ್ಶಿಸುತ್ತಾ, 'ನ್ಯಾಯ ಮಂಡಳಿಗೆ ಧಿಕ್ಕಾರ' ವೆಂಬ ಘೋಷಣೆ ಕೂಗುತ್ತಾ ಸಭಾತ್ಯಾಗ ಮಾಡಿದರು)

ಶ್ರೀ ಬಿ.ಎಸ್.ಯಡಿಯೂರಪ್ಪ:- ವಾಟಾಳ್ ನಾಗರಾಜ್‌ರವರೇ ನಿಮ್ಮ ಒತ್ತಾಯವೇನಿದೆ, ನಿಮ್ಮ ಬೇಡಿಕೆಗೂ ನಮ್ಮ ಬೇಡಿಕೆಗೂ ಯಾವುದೇ ವ್ಯತ್ಯಾಸವಿಲ್ಲ. ತಮಿಳುನಾಡಿಗೆ ನೀರು ಬಿಟ್ಟಿರುವ ಪರಿಣಾಮವಾಗಿ ಮಂಡ್ಯ, ಹಾಸನ ಮತ್ತು ತುಮಕೂರು ಜಿಲ್ಲೆಗಳಿಗೆ ಏನು ಅನ್ಯಾಯವಾಗುತ್ತಿದೆ, ನಾವೂ ಸಹ ಅನಿವಾರ್ಯವಾಗಿ ಆ ಜಿಲ್ಲೆಗಳ ಜನರ ಜೊತೆ ಹೋರಾಟ ಮಾಡುವಂಥ ಒಂದು ಸಂದರ್ಭ ಬರುತ್ತದೆ. ಈಗ ಸದನ ನಡೆಯುವಂಥ ಕಾಲದಲ್ಲಿ ನಾವು ಸದನ ಬಿಟ್ಟು ಮಂಡ್ಯ ಹಾಸನ